**ಸಿ.ಸಿ.ನಂ.304/2024**

**ಡಿ.ಡಬ್ಲ್ಯೂ.1**

**ಸಾಕ್ಷಿಗೆ ದಿನಾಂಕ : 15-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ಶ್ರೀ.ಎ.ಎಸ್.ಎಸ್ ವಕೀಲರಿಂದ ಪಿರ್ಯಾದಿ ಪರವಾಗಿ**

1. ನೀವು ಹಾಜರಪಡಿಸಿದ ನಿಡಿ-2 ರಿಂದ ನಿಡಿ-7 ಕ್ರಿಮಿನಲ್ ಅಫೀಲ ನಂ.5020/23, 5022/23, 5023/23 ರ ಬಗ್ಗೆ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ರಾಜು ಭಂಟನೂರ ಅವರು ಚೆಕ ಬೌನ್ಸ ಪ್ರಕರಣ ಸಲ್ಲಿಸಿದ್ದು, ಖಾಲಿ ಚೆಕ ಪಡೆದಿದ್ದು, ಸಹಿ ಅವರೇ ಮಾಡಿ ಅವರೇ ಬರೆದುಕೊಂಡು ಹಾಜರಪಡಿಸಿದ್ದಾರೆ ಎಂದು ಹೇಳುತ್ತಾರೆ. ಪಿರ್ಯಾದಿದಾರ ಎಲ್.ಐ.ಸಿ ಏಜೆಂಟ್ ಇದ್ದಾನೆ ಎಂದು ನಿಮ್ಮ ಮುಖ್ಯ ವಿಚಾರಣಾ ಸಮಯದಲ್ಲಿ ಹೇಳಿದ್ದು, ಅದಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಹಾಜರಪಡಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ.

ಪಿರ್ಯಾದಿದಾರನಿಗೆ ಆರ್ಥಿಕ ಸಾಮರ್ಥ್ಯ ಇಲ್ಲ ಎಂದು ಸಾಕ್ಷಿ ನುಡಿದಿದ್ದು ಅದನ್ನು ಪುಷ್ಟಿಕರಿಸಲು ದಾಖಲಾತಿ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿಯು ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಹಣ ತುಂಬಲು ಆಗುವುದಿಲ್ಲ ಎಂದು ಸಲ್ಲಿಸಿದ ಅಫಿಡೇವಿಟ್ ಹಾಜರಪಡಿಸಿದ್ದೇನೆ ಎಂದು ಹೇಳುತ್ತಾರೆ. ಪಿರ್ಯಾದಿದಾರನು ತನ್ನ ಆಸ್ತಿಯ ಮೇಲೆ ಹಲವಾರು ಸಾಲ ತೆಗೆದಿದ್ದಾನೆ ಎಂದು ನೀವು ನುಡಿದಿದ್ದು, ಆತನ ಆಸ್ತಿ ಎಷ್ಟು ಇದೆ ಎಂದು ಹೇಳಬಹುದಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರ ಮತ್ತು ಆತನ ಹೆಂಡತಿಯ ಹೆಸರಿನಲ್ಲಿ ಇದ್ದ ಎಲ್ಲಾ ಆಸ್ತಿಗಳು ಸೇರಿ ಒಟ್ಟು 70 ಏಕರೆ ಆಸ್ತಿ ಇದೆ ಎಂದು ನಿಮಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ಮಧ್ಯಸ್ಥಿಕೆಗಾರನಾಗಿ ಪಿರ್ಯಾದಿದಾರನಿಗೆ ಹಲವಾರು ನಿವೇಶನಗಳನ್ನು ಕೊಡಿಸಿದ್ದು,ಸದರಿ ಕ್ರಯ ದಸ್ತುಗಳಿಗೆ ಸಾಕ್ಷಿದಾರನಾಗಿ ಸಹಿ ಮಾಡಿದ್ದೀರಾ ಎಂದರೆ ಸರಿಯಲ್ಲ. ಸತ್ಪಾಲರೆಡ್ಡಿ ಹೊಸುರ ಮತ್ತು ಪಿರ್ಯಾದಿದಾರನ ನಡುವೆ ಒಂದು ಕ್ರಯದ ಕರಾರು ಪತ್ರ ಆಗಿದ್ದು, ಅದಕ್ಕೆ ನೀವೇ ಮಧ್ಯಸ್ಥಿಕೆಗಾರರಾಗಿ ಸಹಿ ಮಾಡಿದ್ದೀರಿ ಎಂದು ಸಾಕ್ಷಿಗೆ ಒಂದು ಕರಾರು ಪತ್ರ ಎಂಬ ಶೀರ್ಷಿಕೆಯುಳ್ಳ ದಿಃ12.09.2018 ರ ಝರಾಕ್ಸ ದಾಖಲಾತಿ ತೋರಿಸುತ್ತಿದ್ದು, ಅದರ ಮೇಲಿನ ಸಹಿ ತನ್ನದಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸತ್ಪಾಲ ರೆಡ್ಡಿ ಹೊಸುರ ಅವರ ಪರಿಚಯ ಇದೆಯಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-2 ರಿಂದ ನಿಡಿ-7 ರ ದಾಖಲಾತಿಗಳಲ್ಲಿ ಎದುರುದಾರರು ಯಾರು ಇದ್ದಾರೆ ಎಂದು ಗೊತ್ತಿದೆಯಾ ಎಂದರೆ ಮಾಹಿತಿ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-2 ರಿಂದ ನಿಡಿ-7 ದಾಖಲಾತಿಗಳನ್ನು ನೀವು ಹಾಜರಪಡಿಸಿದ್ದೀರಾ, ಬೇರೆಯವರು ಹಾಜರಪಡಿಸಿದ್ದೀರಾ ಎಂದರೆ ನಾನು ಹಾಜರಪಡಿಸಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರನ ವಾರ್ಷಿಕ ಉಳಿತಾಯ 40 ಲಕ್ಷ ರೂಪಾಯಿ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಪಿರ್ಯಾದಿದಾರನ ಆರ್ಥಿಕ ಪರಿಸ್ಥಿತಿ ಮತ್ತು ಆತನ ಆದಾಯದ ಬಗ್ಗೆ ನಿಮಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ನೀವು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

2. ನೀವು ನಿಮ್ಮ ಪ್ರಕಾರ ನಿಡಿ-8 ರಿಂದ ನಿಡಿ-10 ಛಾಯಾಚಿತ್ರಗಳಲ್ಲಿ ಕಾಣಿಸುವ ಚೆಕ್ಕನ್ನು ಯಾವ ಕಾರಣಕ್ಕಾಗಿ ನೀಡಿದ್ದೀರಿ ಎಂದರೆ ಪಿರ್ಯಾದಿದಾರ ಎಲ್.ಐ.ಸಿ ಏಜೆಂಟ್ ಆಗಿದ್ದರಿಂದ ಖಾಲಿ ಚೆಕ್ಕನ್ನು ನೀಡಿದ್ದೆ ಎಂದು ಹೇಳುತ್ತಾರೆ. ಮೊದಲು ಒಂಭತ್ತೂವರೆ ಲಕ್ಷ ಬರೆದಿದದ್ದನು ಹತ್ತೊಂಭೊತ್ತವರೆ ಲಕ್ಷ ಎಂದು ತಿದ್ದುಪಡಿ ಮಾಡಿದ್ದಾರೆ ಎಂದು ಸಾಕ್ಷಿ ನುಡಿದಿದ್ದು, ಆ ರೀತಿ ನಿಮ್ಮ ಪ್ರಕಾರ ಒಂಭತ್ತೂವರೆ ಲಕ್ಷ ರೂಪಾಯಿಯ ಚೆಕ್ಕನ್ನು ಯಾವ ಕಾರಣಕ್ಕಾಗಿ ನೀಡಿದ್ದೀರಿ ಎಂದರೆ

ನಾನು ಏನು ಬರೆಯದೇ ಚೆಕ್ಕ ನೀಡಿದ್ದೆ ಎಂದು ಹೇಳುತ್ತಾರೆ. ಚೆಕ್ಕನಲ್ಲಿ ಏನು ಬರೆದಿಲ್ಲದ ಕಾರಣ ಯಾವುದೇ ತಿದ್ದುಪಡಿ ಮಾಡಿಲ್ಲ ಎಂದರೆ ಅವರೆ ಬರೆದಿದ್ದಾರೆ ಎಂದು ಹೇಳುತ್ತಾರೆ.

3. ಸಾಕ್ಷಿಗೆ ಈಗ ನಿಡಿ-10 ಛಾಯಾಚಿತ್ರ ತೋರಿಸುತ್ತಿದ್ದು, ನೀವು ಚೆಕ ನೀಡಿದಾಗ ತೆಗೆದ ಛಾಯಾಚಿತ್ರ ಎಂದರೆ ಸರಿಯಲ್ಲ ಎಂದು ಹೇಳುತ್ತಾರೆ. ನಿಡಿ-10 ಛಾಯಾಚಿತ್ರವನ್ನು ಯಾವಾಗ ತೆಗೆಯಲಾಯಿತು ಎಂದರೆ ಸಾಕ್ಷಿಯು ನಾನು ಛಾಯಾಚಿತ್ರ ತೆಗೆದಿಲ್ಲ, ಪಿರ್ಯಾದಿದಾರನೆ ತೆಗೆದಿದ್ದಾನೆ ಎಂದು ಹೇಳುತ್ತಾರೆ. ನೀವು ಯಾವುದಾದರೂ ಜೀವ ವಿಮೆ ಮಾಡಿಸಿದ್ದೀರಾ ಎಂದರೆ ಮಾಡಿಸಿಲ್ಲ, ಮಾಡುವುದು ಇತ್ತು ಎಂದು ಸಾಕ್ಷಿ ಹೇಳುತ್ತಾರೆ. ನೀವು ನಿಮ್ಮ ಪ್ರಕಾರ ಪಿರ್ಯಾದಿದಾರನ ಬಳಿ ಚೆಕ ಇದೆ ಎಂದು ಪಿರ್ಯಾದಿದಾರನಿಗೆ ನೋಟಿಸ್ ಕೊಟ್ಟಿದ್ದೀರಾ ಅಥವಾ ಕೇಳಿದ್ದೀರಾ ಎಂದರೆ ನೋಟಿಸ್ ನೀಡಿಲ್ಲ, ಮೌಖಿಕವಾಗಿ ಕೇಳಿದ್ದೆ ಎಂದು ಹೇಳುತ್ತಾರೆ. ನೀವು ನಿಮ್ಮ ಪ್ರಕಾರ ನಿಮಗೆ ಮೋಸ ಆಗಿದೆ ಎಂದು ಪೊಲೀಸ ಠಾಣೆಯಲ್ಲಿ ದೂರು ಸಲ್ಲಿಸಿದ್ದೀರಾ ಎಂದರೆ ದೂರು ಸಲ್ಲಿಸಿದ್ದೇನೆ ಎಂದು ಹೇಳುತ್ತಾರೆ. ನೀವು ನಿಮ್ಮ ಆರ್ಥಿಕ ಅವಶ್ಯಕತೆಗಾಗಿ ಅಗತ್ಯವಿದ್ದಾಗ ಪಿರ್ಯಾದಿದಾರನಿಂದ ಸಣ್ಣ ಸಣ್ಣ ಮೊತ್ತ ಪಡೆಯುತ್ತಿದ್ದು, ಅದನ್ನು ಹಿಂದಿರುಗಿಸಿದ್ದು, ದೊಡ್ಡ ಮೊತ್ತವನ್ನು ಪಡೆದು, ಅದನ್ನು ಪಿರ್ಯಾದಿದಾರನಿಗೆ ಮೋಸ ಮಾಡುವ ಉದ್ದೇಶದಿಂದ ಹಿಂದಿರುಗಿಸಿಲ್ಲ ಎಂದರೆ ಸರಿಯಲ್ಲ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯ ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ